ಶ್ರೀವಿದ್ಯಾಪ್ರಸನ್ನತೀರ್ಥ ವಿರಚಿತ

ಶ್ರೀಸುಮಧ್ವವಿಜಯ ಸಾರಸಂಗ್ರಹ

ಲಕುಮಿವಲ್ಲಭನಾಜ್ಞೆಯನು ತಾ ಮುಕುಟದಲಿ ವಹಿಸುತಲಿ ಸುರವರ
ನಿಕರವಂದಿತಚರಣ ಕಪಿರೂಪವನೆ ತಾ ತಾಳಿ ।
ಲಕುಮಿ ಸೀತೆಗೆ ರಾಮಚರಿತೆಗಳಖಿಲದಿಂ ಸಂತಸವ ಪುಟ್ಟಿಸಿ
ಶಕುತಿಯಿಂದಲಿ ವನಧಿ ಲಂಘಿಸಿ ರಘುವರನ ನಮಿಸಿ ॥ ॥ 1 ॥

ವನಧಿಯಲಿ ಸೇತುವೆಯ ಕಟ್ಟುತ ದನುಜರನು ಸದೆಬಡಿದು ದಶರಥ
ತನಯಸತಿ ನೀಡಿದ ಸುಮಾಲಿಕೆಯನುಗ್ರಹವ ಪಡೆದು ।
ವನಜನಿಲಯಳ ವಲ್ಲಭನ ಪದ ವನಜವು ಹೃದಯದಲಿ ಸಂತತ
ಮನನದಲಿ ಕಿಂಪೂರುಷದಲಿಹ ಹನುಮನನು ಭಜಿಪೆ ॥ ॥ 2 ॥

ಪಾಂಡುಸತಿ ಮಾರುತನು ಮುಟ್ಟಲು ಗಂಡುತನಯನ ಪಡೆಯಲಾ ಶಿಶು
ಖಂಡಿಸಿತು ಶತಶೃಂಗ ಗಿರಿಯನು ತನುವ ಸಂಗದಲಿ ।
ತಂಡತಂಡದಿ ರಾಜಕುವರರ ಪುಂಡಡಗಿಸಿ ದ್ರುಪದ ಧರಣೀ
ಮಂಡಲೇಶನ ಕುವರಿ ಕರಕಮಲಗಳ ತಾ ಗೆಲಿದ ॥ ॥ 3 ॥

ಅರಿಸಮೂಹವ ಪೊಸಕಿ ತಾ ಯದು ವರನ ಚರಣಾಂಬುರುಹ ಮಧುಕರ
ನುರು ಪರಾಕ್ರಮವರಿತು ದಿತಿಜರು ಮತ್ಸರದಿ ಉರಿದು ।
ಧರಣಿಯಲಿ ಪುಟ್ಟಿದರು ದುರ್ಮತ ಸರಣಿ ಹರಡುತ ಸೇಡನೆಸಗಲು
ಮರುದಂಶನ ಭೀಮಸೇನನ ಚರಣವೇ ಶರಣು ॥ ॥ 4 ॥

ನಿಜಮತಿಯ ದಿನಕರನು ಮುಳುಗಲು ಅಜಿತನಾಜ್ಞೆಯ ಪಡೆದ ಮರುದನು
ಋಜುತಪಗಳಾಚರಿಸಿ ಪರಮ ವಿಶುದ್ಧರಾಗಿದ್ದ ।
ಸಜನಶೇಖರ ಮಧ್ಯಗೇಹ ದ್ವಿಜವರನ ಸತಿಯುದರದಲಿ ತಾ
ಬಿಜಯಗೈದನು ಹೊರಗೆಡಹಿ ಬೇರೊಂದನಾಕ್ಷಣದಿ ॥ ॥ 5 ॥

ಅಸಮ ಮೂವತ್ತೆರಡು ಲಕ್ಷಣ ಶಿಶು ಶರೀರವ ಪೊಕ್ಕನಾಕ್ಷಣ
ಬಿಸುಟನಾ ಪರಜೀವವನು ಅಸುಪತಿಯು ತಾ ಹೊರಗೆ ।

ಅಸುರನಿಕರಕೆ ಖೇದ ಸುಖಸಂತಸವು ಸಜ್ಜನತತಿಗೆ ಈ ಪರಿ
ಸುಸಮಯವಿದೆಂಬುದ ನುಡಿಯಿದು ದೇವದುಂದುಭಿಯು ॥ ॥ 6 ॥

ಗೋಪ್ರದಾಯಕ ವಿಪ್ರವರ್ಯಗೆ ಕ್ಷಿಪ್ರದಲಿ ಸುಪ್ರಜ್ಞೆಯಿತ್ತನು
ಸ್ವಪ್ರಭಾವದಿ ನಿಜಜನರ ಗ್ರಹಭಯವ ನೀಗಿಸುತ ।
ವಿಪ್ರಸತಿ ಹೊರಗಿರಲು ರೋದನ ತಪ್ಪಿಸಲು ನಿಜ ಸಹಜೆಯುಣಿಸಿದ
ಪ್ರಪ್ರಪಕ್ವ ಕುಲಿತ್ಥ ಭುಜಿಸಿ ಜೀರ್ಣಸಿದ ಕ್ಷಣದಿ ॥ ॥ 7 ॥

ಮೃದುಳ ಕಲಭಾಷಣದಿ ಸ್ವಜನಕೆ ಮುದವನೀಯುತಲೊಂದು ದಿನ
ವೈದಿದನು ವನವನು ವೃಷಭ ಬಾಲವ ಪಿಡಿದು ಸಂಸತದಿ ।
ಬೆದರಿಸಿದ ಋಣಕೊಟ್ಟ ಧನಿಕನ ಹೃದಯ ಕರಗುವ ತೆರದಿ ಸುಂದರ
ವದನ ದರ್ಶನವಿತ್ತ ವಾಯುಕುಮಾರ ರಕ್ಷಿಸಲಿ ॥ ॥ 8 ॥

ಜನನಿಜನಕರ ಸಹಿತ ಬಾಂಧವ ಜನರ ಗೃಹಕೊಂದು ದಿನ ತೆರಳಿದ
ಜನತೆಯುತಿ ಸಂಭ್ರಮದಲಿರುತಿರೆ ತರಳ ಹೊರಹೊರಟ ।
ವನವನವ ಸಂಚರಿಸಿಯಲ್ಲಿಹ ವನಜನಾಭನ ಮಂದಿರಗಳಲಿ
ದಣಿವು ಕಾಣದೆ ಹರಿಯ ನಮಿಸುತ ಸಿಕ್ಕಿದನು ಪಿತಗೆ ॥ ॥ 9 ॥

ಯಾರು ನಿನಗೆ ಸಹಾಯಕರು ಈ ಘೋರವನದಲಿ ಪೇಳೆನಲು ತಾ
ತೋರಿದನು ವನಸದನವಲ್ಲಭ ಮಾರಜನಕನನು।
ಸೂರಿ ಶಿವನನು ಗೆಲಿದು ಸಭೆಯಲಿ ಚಾರುವಟುವೆನಿಸಿದ ಸಕಾಲದಿ
ಮಾರುತನ ಮೂರನೆಯ ರೂಪವು ಶ್ರೇಯವನು ಕೊಡಲಿ ॥ ॥ 10 ॥

ಸರಿದು ಬರುತಿರೆ ಕೊಲ್ಲಲೋಸುಗ ಉರಗರೂಪಿಯ ದೈತ್ಯನನು ವರ
ಚರಣಕಮಲದ ಲೀಲೆಯಲಿ ಸಂಹರಿಸಿದನು ಕ್ಷಣದಿ ।
ಸುರವರಾರ್ಚಿತ ಚರಣನಾದರು ಧರಣಿಸುರನನು ನಮಿಸಿ ವೇದವ
ನರಿಯುವಂದದಿ ನಟನೆ ಮಾಡಿದ ಲೋಕಶಿಕ್ಷಕನು ॥ ॥ 11 ॥

ಬಾಲಲೀಲೆಗಳಲ್ಲಿ ಬಹುತರ ಕಾಲವನು ಕಳೆಯುತ ವಿನೋದದಿ
ಬಾಲನೊಬ್ಬನ ಚಿರತನದ ಯಾತನೆಯ ಪರಿಹರಿಸಿ ।
ಆಲಯಕೆ ತೆರಳುವ ಮೊದಲು ಗುಣಶಾಲಿ ಗುರುವನು ನಮಿಸಿ ತನ್ನ ಕೃ
ಪಾಲವದಿ ಪರಲೋಕ ಸಾಧಕ ಹರಿ ಭಕುತಿಯಿತ್ತ ॥ ॥ 12 ॥

ಧರಣಿಭವ ದಿತಿಸುತರ ದಂಡಿಸೆ ಪರಮಹಂಸಾಶ್ರಮವ ಪಡೆಯಲು
ಗುರುಗಳನು ಹುಡುಕುತಲಿ ಹೊರಟನು ಸಕಲವ ತ್ಯಜಿಸಿ ।
ಪರಮಮಂಗಳ ವೇದಿಜೆಯ ಕರ ಸರಸಿಜದಿ ದೊರೆತುದುದ ಭುಂಜಿಸಿ
ಕರಣ ಶುದ್ಧಿಯಲ್ಲಿದ್ದ ಯತಿವರನೋಲಗಕೆ ಬಂದ ॥ ॥ 13 ॥

ತಾಳಿದರೆ ಯತ್ಯಾಶ್ರಮವ ನೀ ಪಾಲಕರು ಯಾರೆಮಗೆ ಭುವಿಯಲಿ
ಲಾಲಿಸೆಮ್ಮಯ ವಚನವೆಂದರು ಜನಕಜನನಿಯರು ।
ಪಾಲಿಸುವನೆನ್ನನುಜ ನಿಮ್ಮನು ಕೇಳಿದಿದ್ದರೆ ಎನ್ನ ನುಡಿಯನು
ತಾಳಲಾರಿರಿ ಸತತ ದುಃಖವನೆಂದು ದೃಢಮನದಿ ॥ ॥ 14 ॥

ಗುರುವರೇಣ್ಯರ ಕರಸರೋಜದಿ ಪರಮಹಂಸಾಶ್ರಮವ ಪೊಂದುತ
ಕರೆದರಾತಗೆ ಧರೆಸುರರು ವರನಿಗಮಗಳ ತತಿಯ ।
ಹರುಷದಲಿ ವರ ಪೂರ್ಣಬೋಧಾಭಿದದಿ ಗುಣಗಳನರಿತು ಜೀವರ -
ವರವರ ಪರಿಮಿತ ಮಾತ್ರ ಪ್ರಣವ ಜಪಾಧಿಕಾರಿಗಳು ॥ ॥ 15 ॥

ರಜತಪುರವಲ್ಲಭನ ಸೇವೆಗೆ ವಿಜಯವೆಂಬುದ ತೋರುವಂದದಿ
ಭುಜಪಿಡಿದು ತಾ ಕೊಟ್ಟನೀತನು ಅಚ್ಯುತೇಕ್ಷರಿಗೆ ।
ಅಜಿತನಾಜ್ಞೆಯ ಪಡೆದ ಸುರನದಿ ಬಿಜಯಿಸಿದಳಾಸ್ಥಳಕೆ ಕೀರ್ತಿಯ
ಧ್ವಜವು ಹಾರಿತು ವಾದದಲಿ ಸುಜನಾರ್ತಿ ಮರೆಯಾಯ್ತು ॥ ॥ 16 ॥

ವೇದವಿದ್ಯಾ ರಾಜ್ಯದಲಿ ಪರಮಾದರದಲಭಿಷೇಕವೀತಗೆ
ಗೈದರಚ್ಯುತಮತಿಯತೀಮದ್ರರೊಂದು ದಿನ ।
ಬಾಧಬಾರದ ಮೋದವನು ದಿನ ಸಾಧಿಸುವ ಶಾಸ್ತ್ರಗಳಾನು ರಚಿಸಲು
ಮೋದತೀರ್ಥ ಸುನಾಮವಿವರಿಗೆ ಸಾರ್ಥಕವಾಯ್ತು ॥ ॥ 17 ॥

ಹೇಯವಾದಗಳರಿತ ಕೆಲರನು ನ್ಯಾಯಶಾಸ್ತ್ರದಿ ಚತುರರನು ಹೊಸ
ನ್ಯಾಯಗಳ ತೋರುತಲಿ ಗೆದ್ದರು ಅತಿಸುಲಭದಲೆ ।
ಜೇಯಪೂರ್ಣಪ್ರಮತಿ ಧರೆಯೊಳ ಜೇಯರೆನಿಸಿದ ಬುದ್ಧಿಸಾಗರ
ಪ್ರೇಯನೀತಗೆ ವಾದಿಸಂಹನ ಗೆಲಿದು ತಾ ಮೆರೆದ ॥ ॥ 18 ॥

ಅಗುಣನೀಶ್ವರ ಈಶಜೀವರು ವಿಗತಭೇದರು ಜಗದಿಂತೆನಿತು
ಬೊಗಳುತಿಹ ಮಾಯಿಗಳ ಭಾಷ್ಯದ ದೋಷಗಳ ತೋರಿ ।
ಸುಗಮ ಸೂತ್ರಾರ್ಥಗಳ ವಿವರಿಸಿ ಸ್ವಗುರುಸಹಿತದಿ ಹೊರಟು ದಕ್ಷಿಣ
ದಿಗನು ಸಂಚರಿಸುತ ಬಂದರು ವಿಷ್ಣುಮಂಗಳಕೆ ॥ ॥ 19 ॥

ಮಂಗಳಾಂಗನ ಚರಣಕೆರಗುತ ಅಂಗುಟದ ಜಾತರ ಪ್ರಭಾವದಿ
ತುಂಗಕದಲೀನಿಕರಗಳ ಭುಂಜಿಸುತ ಭಿಕ್ಷೆಯಲಿ ।
ಅಂಗಪರಸಿಜನಾಭಶ್ರೀ ರಂಗರಮಣನ ನಮಿಸಿ ಭೂಸುರ
ಸಂಘದಿಂದಾದರವ ಪಡೆಯುತ ಮೆರೆದ ಸಭೆಗಳಲಿ ॥ ॥ 20 ॥

ಛಲದಿ ಸಭೆಯಲಿ ಬುಧಜನಂಗಳು ಹಲವು ವಿಧ ಪ್ರಶ್ನೆಗಳ ಮಾಡಲು
ಸುಲಭವಾದುತ್ತರಗಳಿತ್ತರು ತಿಳಿಯಬಯಸಿದರು ।
ಹಲವು ವಿಧದರ್ಥಗಳವರು ಶ್ರೀ ನಿಲಯ ನಾಮದ ಸಾಸಿರಗಳಿಗೆ
ಅಲವಬೋಧರು ಪೇಳಲತಿ ವಿಸ್ಮಯದಿ ನಮಿಸಿದರು ॥ ॥ 21 ॥

ಒಂದು ದಿನ ಸದಸಿನಪಾಲಾ ಎಂಧಿರುವ ಪದದರ್ಥವನು ಬಲು
ಸುಂದರಾಂಗಿಯಳೆಂದು ನುಡಿದರು ನಂಬಿಕೆಯು ಬರಲು ।
ಮುಂದೆ ಬರಲಿಹ ವಿಪ್ರವರನನು ಸಂಧಿಸುತ ಕೇಳಿರಿದರರ್ಥವ
ನೆಂದು ಸರ್ವಜ್ಞತೆಯ ಜನರೊಳು ಪ್ರಕಟಪಡಿಸಿದರು ॥ ॥ 22 ॥

ಸತಿಯ ಸಭೆಯಲಿ ಸೀರೆ ಸೆಳೆದತಿ ಖತಿಯಪಡಿಸಿದ ದುರುಳ ದನುಜರ
ತತಿಯ ಸವರುವ ಘೋರದೀಕ್ಷೆಯ ಬಂಧನದ ತೆರದಿ ।
ಶ್ರುತಿತತಿಯು ಮಾಯಾಖ್ಯವಾದದ ಚಿತೆಯಲಿರುತಿರೆ ಸುಜನಶರಣರು
ದಿತಿಸುತರ ನಾಶನದ ಕಂಕಣಕಟ್ಟಿದರು ಕ್ಷಣದಿ ॥ ॥ 23 ॥

ಹಿಮಗಿರಿಯ ತಲದಲ್ಲಿ ನೆಲೆಸಿಹ ಕಮಲೆರಮಣನ ಕಂಡು ವಂದಿಸಿ
ವಿಮಲಮತಿಗಳು ಗೀತೆಗವರ ಭ್ಯಾವನರ್ಪಿಸಲು ।
ಹಿಮನಿಲಯ ಶೃಂಗದಲಿ ಬದರೀದ್ರುಮ ಬುಡದಿ ರಾಜಿಸುವ ವ್ಯಾಸಾ-
ಶ್ರಮವ ಸೇರಲು ತೆರಳಿದರು ಹರಿಯಾಜ್ಞೆಯನುಸರಿಸಿ ॥ ॥ 24 ॥

ತುಹಿಮಹಿತುದಿಯಲ್ಲಿ ರಾಜಿಸುತಿಹ ಬದರಿಷಂಡಗಳ ಮಧ್ಯದಿ
ಅಹಿಪತಿಯ ಭೋಗದಲಿ ರಮಿಪ ಶ್ರೀಪತಿಯ ತೆರದಿ ।
ಬಹುಳ ತೇಜವ ನೋಡಿದರು ಭೂ ಸುರರ ಸಮೀಪಕೆ ಬರಲು ತಾಪಸ
ನಿವಹ ವಿಸ್ಮಯದಿಂದ ನೋಡಿದರಾವರಿವರೆಂದು ॥ ॥ 25 ॥

ತಾಪಸೋತ್ತಮ ಬಾದರಾಯಣ ರೂಪವನುಪಮಚತುಸ್ಸುಖಮಾಯಾ
ಪಾದಮೌಳಿಯ ನೋಡಿ ಪರವಶರಾಗಿ ಮೈಮರೆತು ।

ತಾಪಸರ ಮಧ್ಯದಲ್ಲಿ ಪೊಳೆಯುವ ರೂಪವಿದು ಮಾನಸದಿ ನೆಲೆಸಿಹ
ಶ್ರೀಪತಿಯೆಂದರಿತು ವಿಸ್ಮಿತರಾದರಾಕ್ಷಣದಿ ॥ ॥ 26 ॥

ಭಕುತಿಯಲಿ ಬಾಗಿದರು ಶಿರವನು ಸುಕೃತಶಾಲಿಗಳಾಕ್ಷಣದಿ ನಗು-
ಮುಖದಿಂದ ಬಂದೆತ್ತಿದರು ವ್ಯಾಸರು ಪ್ರಥಮ ಭಕುತರನು ।
ಶುಕಪಿತರು ಭಕುತಾಗ್ರಣಿಗಳೀ ಸುಖಕರಾಲಿಂಗನದಲಿರುತಿರೆ
ಪ್ರಕಟವಾಯಿತು ರವಿಸುತೆಯ ಸುರನದಿಯ ಸಂಗಮವು ॥ ॥ 27 ॥

ತನಯ ಶುಕನಿಗೂ ದೊರೆಯದಿಹ ಲಾಲನೆಯ ಪಡೆದ ಮಹಾತ್ಮರನು ಅತಿ
ವಿನಯದಿಂದಾದರಿಸಿದರು ಮುನಿಜನರು ವಿಸ್ಮಯದಿ ।
ವನಜಸಂಭವ ತನಗೆ ಪ್ರಿಯತಮ ಜನಕೆ ಹರಿಸದನದಲಿರುವ ಪರಿ
ಮುನಿವರರು ಯತಿವರರು ಬೆಳಗಿದರಾಶ್ರಮವನ್ನೆಲ್ಲ ॥ ॥ 28 ॥

ಕುಶಲಬುದ್ಧಿಯ ಅಸಮ ಪ್ರತಿಭೆಯು ಹೊಸತೆರೆದ ಪ್ರಭೆಯಿಂದಲೊಪ್ಪುವ
ದಶಮತಿಯ ದರುಶನದಿ ಜನತೆಗೆ ಮೂಡಿತಚ್ಚರಿಯು ।
ಅಸುಪತಿಗಳಾದರದಿ ಶಾಸ್ತ್ರದ ರಸವ ಭುಂಜಿಸಿ ಗುರುಸಹಿತ ಮಾ-
ನಸ ವಿಕಾಸದಿ ಹೊರಟು ಸೇರಿದರಾಶ್ರಮಾಂತರವ ॥ ॥ 29 ॥

ಥಳಥಳಿಸುತಿಹ ಧೂಮವರ್ಜಿತ ಜ್ವಲನದಂತಿಹ ತಾಪಸಾಕೃತಿ
ಕುಳಿತಿರುವುದನು ನೋಡಿ ನಯನ ವಿಕಾಸ ಪೊಂದಿದರು ।
ಹೊಳೆಯಿತಾಕ್ಷಣ ಈತ ನಿಗಮಾವಳಿಯ ರಕ್ಷಿಸಿದಾತನೆಂಬುದು
ಹಲವು ವಿಧದವತಾರಗಳ ಚಿಂತಿಸುವ ನಮಿಸಿದರು ॥ ॥ 30 ॥

ಎರಡು ಹರಿರೂಪಗಳ ಬಳಿಯಲಿ ಪರಮಹರುಷಾಂಭುದಿಯಲಿರುತಿರೆ
ದೊರಕದೀಸುಖವೆಂಬುದರಿತರು ಮೂರು ಲೋಕದಲಿ ।
ಅರಿಯದಜ್ಞಾನಿಗಳು ರಚಿಸಿದ ದುರುಳ ಭಾಷ್ಯವ ಖಂಡಿಸುವುದಕೆ
ತೆರಳು ಭುವನಕೆ ತಕ್ಷಣದಿ ನೀನೆಂದ ಲೋಕಪತಿ ॥ ॥ 31 ॥

ಅಜಿತ ಪಾರಾಶರಿಯು ಕರುಣದಿ ರಚಿಸಿರುವ ವರಸೂತ್ರನಿಕರಕೆ
ರಚಿಸು ಶುಭತಮ ಭಾಷ್ಯವನು ಸಜ್ಜನರನುದ್ಧರಿಸು ।
ಉಚಿತವಲ್ಲವಿದನ್ಯ ಜನರಿಗೆ ಶುಚಿ ಯಶವ ಶ್ರೇಯಸವ ಪೊಂದುವಿ
ವಚನವಿದೆ ಶ್ರೀಪತಿಯು ಪೇಳಿದ ಶಿರದಿ ಧರಿಸಿದರು ॥ ॥ 32 ॥

ಹೋಗಲಾಜ್ಞೆಯನಿತ್ತ ಯದುಸುತನಾಗಿ ಜನಿಸಿದ ಹರಿಗೆ ಶಿರವನು
ಬಾಗಿ ಸಕಲವ ಶ್ರವಣಗೈದರು ಶ್ರುತಿಪತಿಗಳಿಂದ ।
ಪೋಗಿಬರಲಪ್ಪಣೆಯ ಪಡೆದರು ವೇಗದಲಿ ದಾಟಿದರು ಗಿರಿಗಳ
ಭೋಗಸುರತರು ನೋಡಿ ಶಿಷ್ಯರು ನೀಗಿದರು ಕ್ಲೇಶ ॥ ॥ 33 ॥

ದ್ವಿಜರು ಭಿಕ್ಷೆಯ ನೀಡಿದೆಲ್ಲವ ತ್ಯಜಿಸದೆಲೆ ಭುಂಜಿಸಿ ಮಹಾಮತಿ
ವಿಜಯ ಪಡೆದರು ಆರುಶಾಸ್ತ್ರಗಳರಿತವರ ಗೆಲಿದು ।
ನಿಜತನುವ ಬೇರೊಂದು ರೂಪವ ಸೃಜಿಸುವಂದದಿ ಸೂತ್ರಭಾಷ್ಯವ
ಸೃಜಿಸಿ ಪೊರೆದರು ಸತ್ಯತೀರ್ಥರು ಬರೆದರಾಭಾಷ್ಯ ॥ ॥ 34 ॥

ಸರಿದು ಗೋದಾವರಿಯ ತಟದಲಿ ಮುರಿತು ಷಟ್ಸಮಯಗಳ ಸುಲಭಲಿ
ಶರಣು ಹೊಡೆಸಿದರೆಲ್ಲರ ವಿದುಷರ ಸಭೆಸಭೆಗಳಲ್ಲಿ ।
ಹಿರಿಯ ಶೋಭನಭಟ್ಟರಲಿ ಬಲು ಸರಳತೆಯ ತೋರುತಲಿ ಭಾಷ್ಯದ
ತಿರುಳುಗಳ ತೋರಿದರು ಯತಿವರರಾತನಿಗೆ ದಯದಿ ॥ ॥ 35 ॥

ಕುಮತದೊಳು ಮತಿಲೀನರಚ್ಯುತ ಪ್ರಮತಿಗಳ ಮತಿರೋಗ ತೊಲಗಿಸಿ
ವಿಮಲಮತಿಯನು ಕರುಣಿಸಲು ಬಲು ಶಾಶ್ವತವದಾಯ್ತು ।
ಅಮಿತಸುಂದರಮೂರ್ತಿ ಗೋಕುಲ ರಮಣನನು ಸ್ಥಾಪಿಸುವ ಯಜ್ಞವ
ಕ್ರಮದಿ ನಡೆಸಲನುಜ್ಞೆಯಿತ್ತರು ॥ ॥ 36 ॥

ಒಂದು ದಿನ ಮಾರ್ಗದಲಿ ಬರುತಿರೆ ನಿಂದ್ಯ ನರಪತಿ ನೆಲವನಗಿಯಲು
ನಂದಿತೀರ್ಥರಿಗಿತ್ತನಾಜ್ಞೆಯ ಒಂದನರಿಯದೆಲೆ ।
ಹಿಂದಿನನುಭವಶೂನ್ಯರಿಗೆ ಹೇಗೆಂದು ತೋರಲು ಭೂಮಿಯಗಿಯುತೆ
ನಿಂದನಾನೃಪ ವಿವಶನಾದನು ಮುಂದೆ ಸಾಗಿದರು ॥ ॥ 37 ॥

ದಿವಿಜೆ ಗಂಗೆಯ ದಾಟಿ ಶಿಷ್ಯರ ನಿವಹದಿಂದೊಡಗೂಡಿ ಬರುತಿರ-
ಲಿವರ ಕೊಲ್ಲಲು ನೃಪನ ದೂತರ ಬಂದರೆದುರನಲಿ ।
ವಿವಿಧ ಯುಕುತಿಗಳಿಂದ ತಡೆಯುತ ಸವಿನುಡಿಯ ಗಾಂಭೀರ್ಯದಿಂದಲಿ
ಯವನ ನರಪತಿಯಿಂದ ಪೊಂದಿದರರ್ಧರಾಜ್ಯವನು ॥ ॥ 38 ॥

ಹೋದಹೋದೆಡೆಗಳಲಿ ಪರಿಪರಿ ಬಾಧಿಸಿದ ಶತ್ರುಗಳ ಗೆಲಿಯುತ
ಬಾದರಾಯಣ ಶಿಲೆಯ ಪಡೆದರು ಧರ್ಮಸುತನಿಂದ ।
ವೇದನಾಯಕನಾಜ್ಞೆಯಲಿ ಪರಮಾದರವ ತೋರಿದರು ದಶಮತಿ
ಶೋಧಿಸಿದ ತಾತ್ಪರ್ಯಗಳ ಪೇಳಿದರು ಭಾರತಕೆ ॥ ॥ 39 ॥

ಹೊದಿಕೆವಸನವು ತೋಯದಂದದಿ ನದಿಯ ಪ್ರವಾಹವ ದಾಟಿ ಬಂದರು
ಮೃದುಲೆ ಗಂಗೆಯು ಪೂಜಿಸಿದಳೀತನನು ಭಕುತಿಯಲಿ ।
ಮುದಕೆ ಶಿಷ್ಯರ ವೃಂದವೆಲ್ಲವ ಕದನದಲಿ ಕೆಡುಹಿದರು ಭಿಕ್ಷವ
ನೊದಗಿಸಿದ ಶಿವ ದ್ವಿಜನ ವೇಷದಿ ಗಾನಕುಶಲರಿಗೆ ॥ ॥ 40 ॥

ಪರಿಪರಿಯ ಲೀಲೆಗಳನೀಪರಿ ಚರಿಸುತಿರಲಾನಂದತೀರ್ಥರು
ಬರನಿಗಮಸೂತ್ರೇತಿಹಾಸಗಳರಿಯಲಾದರದಿ ।
ನೆರೆದಿರುವ ಶಿಷ್ಯರ ಸಮೂಹಗಳರಿಯುವಂದದಿ ಬೋಧಿಸುತ್ತಿರೆ
ಉರಗಪತಿ ಸನಕಾದಿಮುನಿಗಳ ಸಹಿತ ಕೇಳಿದನು ॥ ॥ 41 ॥

ಈಷಣದನು ನೋಡಿದರು ಗಗನದಿ ಭೂಸುರರು ಪ್ರವಚನದ ಸಮಯದಿ
ಶೇಷ ತೆರಳಿದ ತನ್ನ ಭವನಕೆ ಮುನಿಜನರ ಸಹಿತ ।
ಭಾಷ್ಯಪ್ರವಚನದಿಂದ ಲಾಭವಿಶೇಷವೇನೆಂಬುದನು ಕೇಳಲು
ಶೇಷ ಮುಕುತಿಯ ವಿವರಿಸಿದ ಸನಕಾದಿ ಸಹಜರಿಗೆ ॥ ॥ 42 ॥

ತುಂಮತಿಗಳ ಶಾಸ್ತ್ರಗಳ ವ್ಯಾಸಂಗಮಾಡುವ ಸುಜನನಿಕರಕೆ
ಮಂಗಳಾಂಗನು ಕೊಡುವ ತನ್ನಯ ಶಾಶ್ವತದ ಪದವ ।
ಅಂಗನೆಯರೊಡಗೂಡಿ ದುಃಖದ ಸಂಗವಿಲ್ಲದೆ ಪ್ರತಿಕ್ಷಣಗಳಲಿ
ಭಂಗಭಾರದ ಸುಖಗಳನುಭವಿಸುವರು ಮುಕುತಿಯಲಿ ॥ ॥ 43 ॥

ನೋಡುವರು ನಾರಾಯಣನ ಸ್ತುತಿಮಾಡುವರು ಪರಮಾದರದಿ
ತಾವೀಡನರಿಯರು ಸುಂದರ ಸುಮಂಗಳನ ದರುಶನಕೆ ।
ಮೂಡಿದಭಿಲಾಷೆಗಳು ತಕ್ಷಣ ಕೈಗೂಡುವುದು ಹರಿಯಾಜ್ಞೆಯಿಂದಲಿ
ನೋಡಬೇಕೆನ್ನುವರನಾಕ್ಷಣ ತಂದುತೋರಿಸುವ ॥ ॥ 44 ॥

ಪ್ರಚುರಮತಿ ಕೇಸರಿದೀಪರಿ ರಚಿಸುತಿರೆ ವ್ಯಾಖ್ಯಾನಗರ್ಜನೆ
ರುಚಿಸಲಾಗದೆ ಮಾಯಿನರಿಗಳು ನಡುಗಿದವು ಭಯದಿ ।
ಶುಚಿಯ ನಡೆನುಡಿಶೂನ್ಯ ದುರ್ಜನ ನಿಕರ ಚೋಳಜದ್ವೀಪಪುರಿಗಳ
ಭಜಿಸಿದರು ರಕ್ಷಿಸಲು ಮಾಯಾವಾದ ಸರಣಿಯನು ॥ ॥ 45 ॥

ದಿಟ್ಟಪವನನ ಸುತನ ಕೀರ್ತಿಗೆ ಹೊಟ್ಟೆಯುರಿಯಿತು ದುರುಳಜನರಿಗೆ
ಕೆಟ್ಟಯೋಚನೆ ಮಾಡಿ ಪರಿಪರಿ ಪೀಡಿಸಿದರಿವರ ।

ಶಿಷ್ಟಹರಿಭಕುತಾಗ್ರಣಿಯ ತಾವಿಷ್ಟು ಪೀಡಿಸದಿರಲು ತಮಸಿಗೆ
ಕಟ್ಟುವುದು ಪಾಥೇಯವೆಂತೆಂದೀಪರಿಯ ನಡತೆ ॥ ॥ 46 ॥

ಗೆಲಿದು ಶಾರ್ದೂಲಾಖ್ಯ ವಿದುಶನ ಅಲವಮತಿ ವೇದಗಳ ನಿಕರಕೆ
ಸುಲಭದಲಿ ವ್ಯಾಖ್ಯಾನ ತೋರಿದ ಸುಸ್ವರಗಳಿಂದ ।
ಬಳಿಕ ನೀ ಪೇಳೆನಲು ಸ್ವರಗಳ ತಿಳಿಯದೆಲೆ ಶಾರ್ದೂಲ ಪೇಳಲು
ಕುಳಿತ ಜನರಪಹಾಸದಿಂದತಿ ನಾಚಿದನು ದುರುಳ ॥ ॥ 47 ॥

ಪದುಮನಾಮಕನೋರ್ವ ದುರುಳನು ತದನುಗನು ಪುಸ್ತಕಸಮೂಹ
ಕದಿಯಲಿವರನು ನಿರ್ಭಯದಿ ಖಂಡಿಸಿದರಾಕ್ಷಣದಿ ।
ಬೆದರಿದರು ದುರ್ಜನರು ವೇಗದಿ ಚದರಿದರು ಮೆರಯಾಗೆ ವಿಸ್ತರ
ಹೃದಯದೇವಾಲಯವ ಸೇರಿದ ಪ್ರಾಗ್ವವಾಟದಲಿ ॥ ॥ 48 ॥

ಪರಮಪತಿ ಭಕುತರನುದ್ಧರಿಸಲಿಕೆ ನರಪತಿಯ ಪ್ರಾರ್ಥನೆಯ ತಂದಿಹ
ಪುರುಷನೋರ್ವನ ನುಡಿಯ ಲಾಲಿಸಿ ತೆರಳಿದರು ಮುದದಿ ।
ಧರೆಯ ರವಿ ಸಂಚರಿಪ ತೆರದಲಿ ಸರಿದು ಪಶ್ಚಿಮ ಪ್ರಾಂತದಲ್ಲಿಹ
ಸ್ಮರನವಲ್ಲಭನಾಲಯವ ಸೇರಿದರು ಗುರುವರರು ॥ ॥ 49 ॥

ಮ್ಲಾನಿಶಿಯನಾಮಂದಿರದಿ ಕಳೆಯುತ ಪಸರಿಸಲು ಜಯಸಿಂಹರಾಜನು
ಹಸನ ಭಕುತಿಯ ಭರದಿ ಬಂದೆದುರಿನಲಿ ನಮಿಸಿದನು ।
ಅಸಮತೇಜರ ದರುಶನದಿ ಪರವಶರು ಸಾಸಿರ ಜನರು ಬರುತಿರೆ
ಸುಸಮಯದಿ ಶ್ರೀವಿಷ್ಣುಮಂಗಳ ಬಳಿಗೆ ಸಾರಿದರು ॥ ॥ 50 ॥

ಉತ್ತಮರ ಲಕ್ಷಣಗಳಲಿ ಮೂವತ್ತೆರಡು ಮಾದರಿಯ ತೋರುವ
ಮಸ್ತಕಾದಿನಖಾಂತ ಸೌಂದರ್ಯಗಳ ಬೆಳಗುತಲಿ ।
ಶಿಸ್ತಿನಲಿ ಬರುತಿರುವ ಮೂರ್ತಿಯ ಹತ್ತಿರದಿ ನೋಡಿದರು ಜನಗಳು
ಸ್ವಸ್ಥಮಾನಸದಿಂದ ಪೊಕ್ಕರು ದೇವನಿಲಯವನು ॥ ॥ 51 ॥

ಭವದ ತಾಪವ ಪರಿಹರಿಸಿ ಬಲು ಜವದಿ ಮಂಗಳತತಿಯ ನೀಡುವ
ಭಗವದವತಾರಗಳ ಲೀಲಾಮೃತವನುಣಿಸಿದರು ।
ಕವಿವರೇಣ್ಯ ತ್ರಿವಿಕ್ರಮವರ್ಯನು ಸವಿಯನರಿತು ಮಧ್ವಶಾಸ್ತ್ರದ
ಸುವಿನಯದಿ ಬೇಡಿದನು ಗುರುಗಳ ಚರಣದಾಸ್ಯವನು ॥ ॥ 52 ॥

ಋಣಿಯು ನಾನಿರೆ ನಿಮ್ಮ ಕರುಣಕೆ ಮಿಣುಕುತಿರುವರು ಗ್ರಂಥಚೋರರು
ಕೆಣಕಲಾರರು ಮುಂದೆ ನಿಮ್ಮಯ ಸಹಚರರನೆಂದೂ ।
ಗಣಿಸಲಾಗದು ಕುಂದುಕೊರತೆಯ ತೃಣಕೆ ಸಮರೀಜನರು ನರಪತಿ
ವಿನಯದಲಿ ಬೇಡಲು ತ್ರಿವಿಕ್ರಮನನು ಜಗಕಿತ್ತ ॥ ॥ 53 ॥

ಸಕಲಮಂಗಲದಾತ ಸುಜನಕೆ ಸುಖವ ಲೇಶವ ಕೊಡನು ಕುನಕೆ
ಚಕಿತರಾದರು ನೋಡಲೀತನ ಮಧ್ಯಮದ ಜನರು ।
ಅಖಿಲ ಸಮಯದಿ ಸ್ನಾನಜಪತಪ ಸುಖಮಯದ ಶಾಸ್ತ್ರಗಳ ಪ್ರವಚನ
ವಿಕಸವಾದವು ಸುಜನನಿಕರಕೆ ಸಾಧುಕರ್ಮಗಳು ॥ ॥ 54 ॥

ಅರುಣನುದಯದಲೆದ್ದು ಗುರುಗಳು ಹರುಷಮಾನಸದಿಂದ ಶ್ರೀಶನ
ಚರಣಕಮಲವ ಚಿಂತಿಸುತ ಸಂತತವು ।
ಸರಿವ ಸೂರ್ಯನು ಪಶ್ಚಿಮಕೆ ತಾ ಮರೆಯ ಪೊಂದುವತನಕ ಕರ್ಮವ
ಪರಿಪರಿಯಿಂ ಚರಿಸುತ ತಾವನುದಿನ ॥ ॥ 55 ॥

ಸ್ನಾನಮಾಡಿ ತಟಾಕದಲಿ ಶುಚಿ ಮಾನಸದ ಮಂದಿರದಿ ಶ್ರೀಶಗೆ
ಸಾನುರಾಗದಿ ಭಾವಕುಸುಮಗಳರ್ಪಿಸುತ ಮುದದಿ ।
ಪ್ರಾಣಪತಿ ಹರಿಗರ್ಪಿಸಿದ ಪರ ಮಾನ್ನವನು ಭುಂಜಿಸುತಲೀಪರಿ
ಸ್ನಾನಜಪತಪ ಪ್ರವಚನಗಳಿಂ ಕಾಲವನು ಕಳೆದು ॥ ॥ 56 ॥

ಹರಿಯು ಗುಣಗಣನಿಲಯ ಸಕಲವ ನರಿತವನು ಖಗಗಳನು ಸೃಜಿಸುವ
ಪರಿಯ ತೋರುವ ಭಾಷ್ಯಭಾವವ ವಿವರಿಸುತ್ತಿರಲು ।
ಉರುತರದ ಪಾಂಡಿತ್ಯಮದದಿಂದ ಧರೆತಲದಿ ಪ್ರಖ್ಯಾತರಿಹ ಒಂ
ದೆರಡು ವಿಕ್ರಮನಾಮಕರು ಕೇಳಿದರು ಪ್ರವಚನವ ॥ ॥ 57 ॥

ವಾದಸರಣಿಯು ಮುಂದರಿದು ಹದಿ ನೈದು ದಿನಗಳು ಕಳೆದವೀತನು
ವಾದವಲ್ಲೀಡಾಡಿದ ಮಹಾಯುಕುತಿಯಸ್ತ್ರಗಳ ।
ಮೋದತೀರ್ಥರು ಸದೆಯ ಬಡಿದರು ವೇದಯುಕುತಿಗಳಿಮದಾಲಾಕ್ಷಣ
ಪಾದಕೆರಗುತ ವಿಕ್ರಮಾರ್ಯನು ಬೇಡಿದನು ದಾಸ್ಯ ॥ ॥ 58 ॥

ಮಧ್ವತೀರ್ಥರನುಜ್ಞೆ ಪಡೆಯುತ ಶುದ್ಧತತ್ವಗಳನ್ನು ತೋರಲು
ಮಧ್ವ ಭಾಷ್ಯಕೆ ಟೀಕೆ ತತ್ವಪ್ರದೀಪ ರಚಿಸಿದರು ।
ಶುದ್ಧಸಿದ್ಧಾಂತಗಳ ನ್ಯಾಯದ ಪದ್ಧತಿಗಳನು ಬಚ್ಚಿ ತೋರಿ ಪ್ರ
ಸಿದ್ಧತಮರೆಂದೆನಿಸಿದರು ವ್ಯಾಖ್ಯಾನ ರಚಿಸಿದರು ॥ ॥ 59 ॥

ವಿವಿಧ ಸಂಸಾರಿಕ ನೋವು ಸವಿದು ವರವೈರಾಗ್ಯ ಪೊಂದುತ
ಸುವಿನಯದಿ ಪ್ರಾರ್ಥಿಸಿದ ಸಹಜನ ಯತಿವರನ ಮಾಡಿ ।
ಭುವಿಗೆಭೂಷಣ ಪದಮನಾಭರು ಕವಿವರರು ಯತಿವರರನೇಕರು
ಪ್ರವಹಿಸಿದರನುದಿನದಿ ಧರೆಯಲಿ ಜ್ಞಾನಭಕುತಿಯನು ॥ ॥ 60 ॥

ಸ್ಮರಣಮಾತ್ರದಿ ಸಕಲ ದುರಿತವ ತರಿದು ಶುಭಗಳನೀವ ಚರಿತೆಯ
ಪರಿಪರಿಯ ವಿಧಗಳಲಿ ಭಕುತರು ವರ್ಣಿಸುತ್ತಿರಲು ।
ದುರುಳ ವೃಷಲನರಾಧಿಪನು ಬಲು ಗರುವದಿಂದ ದೂಷಿಸಲು ವೇದವ
ಕರತಲದಿ ತೋರಿದರು ನಿಗಮಪ್ರಮಾಣ ವಚನವ ॥ ॥ 61 ॥

ದೀಪವಾರಲು ಪಾತಸಮಯದಿ ತಾಪಸರು ತಮ್ಮಂಘ್ರಿಯುಗುರಿನ
ದೀಪದಲಿ ಬೆಳಗಿದರು ಪ್ರವಚನಗೈದರೊಂದುದಿನ ।
ಸ್ಥಾಪಿಸಿದರತಿ ದೊಡ್ಡಶಿಲೆಯ ಸ್ವರೂಪ ಬಲದಲಿ ತುಂಗೆಯಲಿ ಸೂ
ಯೋರ್ಪರಾಗದಿ ಸ್ನಾನಗೈಯ್ಯಲು ಜಲಧಿಗೈದಿದರು ॥ ॥ 62 ॥

ಜಲಧಿಯಲಿ ಮಜ್ಜನವ ಗೈದರು ತಿಳಿಸಿದರು ಶ್ರುತಿತತಿಗಳರ್ಥವ
ಛಲದಿ ಕಂಠವ ಪಿಡಿದು ದುರುಳನ ನೆಲಕೆ ಕೆಡಹಿದರು ।
ಹಲವು ವಿದದೈಶ್ವರ್ಯಗಳ ತಾ ಬಳಿಯ ಜನರಿಗೆ ತೋರಿದರು ಸುರ
ನಿಲಯವೈಭವಗಳನು ಜೀರ್ಣೋದ್ಧಾರ ಮಾಡಿದರು ॥ ॥ 63 ॥

ವೃಷಲನೋರ್ವನು ಕೊಲ್ಲಬರುತಿರೆ ಹೊಸರವಿಯ ತೆರದಲಿ ವಿಸ್ಮಯ
ವೆಸಗಿದರು ಶ್ರೀಕೃಷ್ಣನ ಸುಧಾರ್ಣವವ ರಚಿಸಿದರು ।
ಪ್ರಸರಿಸಿತು ಸತ್ಕೀರ್ತಿ ಜಗದಲಿ ರಸದ ಗುಣಗಾನದಲಿ ದಿವಿಜರು
ಕುಸುಮಗಳ ಸುರಿಮಳೆಗೈದರು ನಂದಿ ಮುನಿವರಗೆ ॥ ॥ 64 ॥

ಪ್ರಚುರಮತಿ ವಿಜಯಗಳ ಸಾರವ ರಚಿಸಿದೆನ್ನಯ ಪರಮ ಗುರುಗಳು
ವಚನಶುದ್ಧಿಯನಿತ್ತು ನುಡಿಸಿದ ತೆರದಿ ನುಡಿದಿಹೆನು ।
ಶುಚಿಮನದಿ ಸುಸ್ವರದಿ ಪಾಡಲು ಪ್ರಚುರವಾಗಲಿ ಶಾಂತಿಸುಖಗಳು
ಭುಜಪಿಡಿದು ಮೇಲೆತ್ತಿ ಸಲಹುವ ಗುರುವರ ಪ್ರಸನ್ನ ॥ ॥ 65 ॥

॥ಇತಿ ಶ್ರೀ ಶ್ರೀ ವಿದ್ಯಾಪ್ರಸನ್ನತೀರ್ಥವಿರಚಿತ ಸುಮಧ್ವವಿಜಯ ಸಾರಸಂಗ್ರಹ ಸಂಪೂರ್ಣಂ॥